quickmarketreports.com

Date : 07-11-2015

# ಲಾಸಲ್‌ಗಾಂವ್ ಮಾರುಕಟ್ಟೆಗೆ ನೀರುಳ್ಳಿ ಆವಕ ಹೆಚ್ಚಳ

ದೇಶದ್ಯಾಂತ ನೀರುಳ್ಳಿ ಸಗಟು ಮಾರುಕಟ್ಟೆಗಳಿಗೆ ಹೊಸ ಬೆಳೆಯ ನೀರುಳ್ಳಿ ಆವಕ ಹೆಚ್ಚಳವಾಗಲಾರಂಭಿಸಿದ್ದು ಮಹಾರಾಷ್ಟ್ರದ ಲಾಸಲ್‌ಗಾಂವ್ ಮಾರುಕಟ್ಟೆಯಲ್ಲಿ ನೀರುಳ್ಳಿ ದರ ಕ್ವಿಂ.ಗೆ ರೂ 2300ಕ್ಕೆ ಇಳಿಕೆಯಾಗಿದೆಯೆನ್ನಲಾಗಿದೆ. ದರ ಇನ್ನೂ ಇಳಿಕೆ ಕಾಣುವ ನಿರೀಕ್ಷೆಯಿಂದ ವ್ಯಾಪರಿಗಳು ಮತ್ತು ರೈತರು ಕನಿಷ್ಠ ರಫ್ತು ಬೆಲೆ ಇಳಿಕೆಗೆ (MEP) ಆಗ್ರಹಿಸುತ್ತಿದ್ದಾರೆ.

ಪ್ರಸಕ್ತ ಲಾಸಲ್‌ಗಾಂವ್‌ನಲ್ಲಿ 6500ಕ್ವಿಂಟಾಲ್ ನೀರುಳ್ಳಿ ಆವಕವಾಗುತ್ತಿದ್ದು ಸರಾಸರಿ ದರ ಕ್ವಿಂ.ಗೆ ರೂ 2315 ಇದೆ. ಹೊಸ ಬೆಳೆಯು ಏಕ ಕಂತಿನಲ್ಲಿ ಕಟಾವಾಗಿರುವುದರಿಂದ ಆವಕ ಹೆಚ್ಚಳವಾಗುತ್ತಿದ್ದು ದರ ಇನ್ನೂ ಕುಸಿತವಾಗುವ ನಿರೀಕ್ಷೆಯಿದೆ. ಲಾಸಲ್‌ಗಾಂವ್ ಎಪಿಎಂಸಿ ಮಾರುಕಟ್ಟೆಯ ಚೆಯರ್‌ಮ್ಯಾನ್ ನಾನಾ ಸಾಹೇಬ್ ಪಾಟೀಲ್ ಪ್ರಕಾರ ಆವಕ ಹೆಚ್ಚಳವಾಗುತ್ತಿರುವುದರಿಂದ ದರ ಇನ್ನೂ ಇಳಿಕೆಯಾಗಬಹುದು. ನಾಸಿಕ್‌ನ ಉಮ್ರಾನಾ ಮಾರುಕಟ್ಟೆಯಲ್ಲಿ ಆವಕ 15000ಕ್ವಿಂ ಗೆ ಏರಿಕೆಯಾಗುತ್ತಿದೆಯೆನ್ನಲಾಗಿದೆ. ಕಳೆದೆರಡು ವಾರಗಳ ಹಿಂದೆ ಆವಕ 1200ರಿಂದ 1500ಕ್ವಿಂಗೊಳಗೆ ಇತ್ತೆನ್ನಲಾಗಿದೆ. ವಿಳಂಬಿತ ಮಳೆಯಿಂದ ಈ ವರ್ಷ ಬಿತ್ತನೆ ವಿಳಂಬಗೊಂಡು ಕಟಾವು ವಿಳಂಬವಾಗಿ ಈಗ ಆರಂಭವಾಗಿದೆ. ನವೆಂಬರ್ 15ರ ನಂತರ ಹೆಚ್ಚಿನ ರೈತರು ನೀರುಳ್ಳಿ ಮಾರುಕಟ್ಟೆಗೆ ಏಕಾಕಾಲದಲ್ಲಿ ಪೂರೈಸುವ ಸಾಧ್ಯತೆ ಇದ್ದು ಮಹಾರಾಷ್ಟ್ರದ ನಾಸಿಕ್‌ನ 14 ಮಾರುಕಟ್ಟೆಗಳಲ್ಲಿ ಆವಕ 2–2.45ಲಕ್ಷ ಕ್ವಿಂ.ಗೇರುವ ಸಂಭವವಿರುವುದರಿಂದ ದರ 1ಕೆ.ಜಿ ಗೆ ರೂ 10ರೊಳಗೆ ಇಳಿಕೆಯಾಗುವ ಸಂಭವವಿದೆಯೆಂದ ಲಾಸಲ್‌ಗಾಂವ್ ಎಪಿಎಂಸಿ ಮಾರುಕಟ್ಟೆಯ ಚೆಯರ್‌ಮ್ಯಾನ್ ನಾನಾ ಸಾಹೇಬ್ ಪಾಟೀಲ್ ಹೇಳಿದರೆನ್ನಲಾಗಿದೆ.